**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ :-** | 12434/2020 |
| **ಸಿ.ಡಬ್ಲ್ಯೂ : -** | **1** |
| **ದಿನಾಂಕ :-** | **12.11.2024** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಎಸ್ ಕೆ ವಕೀಲರಿಂದ**

ದಿನಾಂಕ 21.01.2019 ರಲ್ಲಿ ನನ್ನ ಹಾಗೂ ಆರೋಪಿ ನಡುವೆ ನಿಪಿ 9 ಆಗಿರುವುದಿಲ್ಲ, ಆದರೆ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ 21.01.2019 ರಲ್ಲಿ ನಿಪಿ 9 ರಲ್ಲಿ ಹೇಳಿರುವಂತೆ ನಾನು ರೂ. 50 ಲಕ್ಷ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಬಳಿ ನಗದು ರೂ. 50 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ರೂ. 50 ಲಕ್ಷ ಆ ದಿನ ಇಲ್ಲದ ಕಾರಣ ನಿಪಿ 9 ಅನ್ನು ಸೃಷ್ಟಿ ಮಾಡಿದ್ದೇನೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಆನಂದ್ ದೊಡ್ಡಮನಿ ಅವರಿಂದ ಮರಳು ಕೊಂಡುಕೊಳ್ಳಲು ಲೀಸ್ ಗೆ ಪಡೆದಿರುವುದಿಲ್ಲ ಎಂದರೆ ಆ ಲೀಸ್ ಪಡೆಯಲು ನನ್ನ ಬಳಿ ಆರೋಪಿ ಹಣ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಆನಂದ್ ದೊಡ್ಡ ಮನಿ ಅವರನ್ನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇಲ್ಲವಾ ಎಂದರೆ ಸಾಕ್ಷಿ ಅವರು ಯಾರು ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಆರೋಪಿ ಕಡೆಯಿಂದ ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ಅವರು ಯಾರು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡಲು ರೇರಾ ಕಾಯ್ದೆ ಅಡಿಯಲ್ಲಿ ಯಾವುದೇ ಅನುಮತಿ ಪಡೆದಿಲ್ಲ. ನಿಪಿ 9 ರಲ್ಲಿ ಇರುವ ಸಾಕ್ಷಿದಾರರ ವಿಳಾಸ ಇಲ್ಲ ಎಂದರೆ ಸಾಕ್ಷಿ ಆರೋಪಿ ಅದನ್ನು ತಯಾರು ಮಾಡಿಸಿಕೊಂಡು ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ 9 ನಾನೇ ತಯಾರಿಸಿರುವುದು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**